ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಸಾರ್ವಜನಿಕ ಲೆಕ್ಕಪತ್ರ ಸಮಿತಿ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ     ದಿನಾಂಕ : DATE : 1/7/2020

### ಸಮಜಾಯಿಸಿ ನೀಡಲು 15 ದಿನಗಳ ಗಡುವು

# ಆರೋಗ್ಯ ಅಧಿಕಾರಿಗಳಿಗೆ ಲೆಕ್ಕಪತ್ರ ಸಮಿತಿ ಡ್ರಿಲ್

■ **ವಿಕ ಸುದ್ದಿಲೋಕ** ಬೆಂಗಳೂರು

ಕೋವಿಡ್ ಚಿಕಿತ್ಸೆಗೆ ಗುರುತಿಸಲಾದ ಆಸ್ಪತ್ರೆಗಳಿಗೆ ವೈದ್ಯಕೀಯ ಸಲಕರಣೆ ಹಾಗೂ ಸಾಮಗ್ರಿಗಳ ಖರೀದಿ ಅಕ್ರಮ ದೂರುಗಳ ಬಗ್ಗೆ ಸಮಜಾಯಿಷಿ ನೀಡಲು ಆರೋಗ್ಯ ಇಲಾಖೆ ಅಧಿಕಾರಿಗಳಿಗೆ ವಿಧಾನಮಂಡಲ ಸಾರ್ವಜನಿಕ ಲೆಕ್ಕಪತ್ರ ಸಮಿತಿ ಮುಂದಿನ ಸೋಮವಾರದವರೆಗೆ ಗಡುವು ನೀಡಿದೆ.

ಸಮಿತಿ ಅಧ್ಯಕ್ಷ ಎಚ್.ಕೆ.ಪಾಟೀಲ್ ನೇತೃತ್ವದಲ್ಲಿ ಮಂಗಳವಾರ ಸಮಿತಿ ಸಭೆ ನಡೆಯಿತು.



ಇಲಾಖೆ ಕಾರ್ಯದರ್ಶಿ ಜಾವೇದ್ ಅಖ್ತರ್, ಆಯುಕ್ತ ಪಂಕಜ್ ಕುಮಾರ್ ಪಾಂಡೆ ಹಾಗೂ ಹಿರಿಯ ಅಧಿಕಾರಿಗಳಿಗೆ ಸಮಿತಿ ಸಮನ್ಸ್ ಮಾಡಿತ್ತು. ಕೋವಿಡ್ 19 ನಿರ್ವಹಣೆಯಲ್ಲಿ ವೈಫಲ್ಯ ಹಾಗೂ ತಪ್ಪುಗಳಿಗಾಗಿ ಸಮಿತಿ ಸದಸ್ಯರು ಪಕ್ಷಾತೀತವಾಗಿ ಆರೋಗ್ಯ ಇಲಾಖೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು.

ವೆಂಟಿಲೇಟರ್, ಸ್ಯಾನಿಟೈಸರ್, ಪಿಪಿಇ ಕಿಟ್ ಖರೀದಿ ಅಕ್ರಮದ ದೂರುಗಳ ಬಗ್ಗೆ ಸಮಿತಿ ಅಧಿಕಾರಿಗಳಿಂದ ವಿವರಣೆ ಬಯಸಿತು. ಸೋಂಕು ನಿರ್ವಹಣೆ ಕೆಲಸದಲ್ಲಿ ತನಿಖೆ ಮಾಡಿ ಮಾಹಿತಿ ಪಡೆಯಲು ವಿಳಂಬವಾಗಿದೆ. 15 ದಿನಗಳ ಸಮಯಾವಕಾಶ ನೀಡಿ ಎಂದು ಜಾವೇದ್ ಅಖ್ತರ್ ಕೋರಿದರು. ಇದಕ್ಕೆ ಒಪ್ಪದ ಸಮಿತಿ ವಾರದೊಳಗೆ ವಿವರಣೆ ನೀಡಲು ಸೂಚಿಸಿತು.

**ಸೋಂಕಿನ ಪ್ರಕರಣಗಳನ್ನು ಮುಚ್ಚಿಟ್ಟಿದೆಯಾ ಸರಕಾರ?**

**ರಾಜ್ಯದಲ್ಲಿ 25 ಸಾವಿರ ಟೆಸ್ಟ್ ವರದಿಗಳು ಬಂದಿಲ್ಲ, ಸಾವಿರಾರು ಪ್ರಕರಣಗಳನ್ನು ಮುಚ್ಚಿಡಲಾಗಿದೆ ಎಂದು ಕೆಲವು ಸದಸ್ಯರು ಆಕ್ಷೇಪಿಸಿದರು. ಈ ಬಗ್ಗೆ ಮಾಹಿತಿ ಪಡೆದು ಬುಧವಾರ ಸಮಿತಿಗೆ ಒದಗಿಸುವುದಾಗಿ ಅಧಿಕಾರಿಗಳು ಸಭೆಗೆ ಭರವಸೆ ನೀಡಿದರು.**

**ಅಧಿಕಾರಿಗಳಿಗೆ ತರಾಟೆ**

ಸೋಂಕಿತರನ್ನು ಪ್ರಾಣಿಗಳಂತೆ ನಡೆಸಿಕೊಳ್ಳಲಾಗುತ್ತಿದೆ. 10 ಜನರಿಗೆ ಒಂದು ಬಾತ್ ರೂಮ್ ಬಳಸಲಾಗುತ್ತಿದೆ. ಸೋಂಕಿತರನ್ನು ಶೆಡ್, ಮೈದಾನಗಳು, ಕಲ್ಯಾಣ ಮಂಟಪಗಳಲ್ಲಿ ಇಡಲಾಗುತ್ತಿದೆ. ಕೋವಿಡ್ ಮಾರ್ಗಸೂಚಿಯಲ್ಲಿ ಇದಕ್ಕೆ ಅವಕಾಶವಿದೆಯೇ ಎಂದು ಸಮಿತಿ ಕಿಡಿಕಾರಿತು.

ಖಾಸಗಿ ಆಸ್ಪತ್ರೆಗಳಲ್ಲಿ 20 ಸಾವಿರ ಬೆಡ್‌ಗಳಿದ್ದು, ಶೇ.50 ಪಡೆಯಲು ಏಕೆ ಸುಗ್ರೀವಾಜ್ಞೆ ಹೊರಡಿಸುತ್ತಿಲ್ಲ? ಆಂಬ್ಯುಲೆನ್ಸ್ ಸಿಗುತ್ತಿಲ್ಲ, ಸೋಂಕಿತರನ್ನು ಪ್ರಾಣಿಗಳಂತೆ ನೋಡಬೇಡಿ. ಸ್ವಂತ ಮನೆಯವರಾಗಿದ್ದರೆ ಈ ರೀತಿ ನಡೆಸಿಕೊಳ್ಳುತ್ತಿದ್ದರೇ? ಅಧಿಕಾರ, ಸಂಪನ್ಮೂಲ ಎಲ್ಲ ಇದ್ದರೂ ಸಮನ್ವಯದಿಂದ ಏಕೆ ಪರಿಣಾಮಕಾರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು ಅಧಿಕಾರಿಗಳನ್ನು ಸದಸ್ಯರು ತರಾಟೆಗೆ ತೆಗೆದುಕೊಂಡರು.